RegdNo B G 155 Sri 3—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆಸಿರಸ್ತೇದಾರ್ ಎಂ ಎ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರನಿರತ ಎಂ.ಎಸ್. ಕೃಷ್ಣರಾವ್ 2

ದ್ವಿತೀಯ ಶ್ರೇಣಿಗಿಂತ ತೃತೀಯ ಶ್ರೇಣಿ ಮೇಲ್ಮಟ್ಟದ್ದೇನು ?

—

ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಉಕ್ತವು ಏನಾಗಿ ; ಅವರ ನಾಲಿಗೆ ಒಹಳ ಹರಿತ ; ಅದರ ಸಹಾಯದಿಂದ ಅವರು ಅದ್ಯಾವ ವಿಷಯ ಕುರಿತೂ ಎದುರಿಯವನ್ನು ಸೋಲಿಸುವ ರೀತಿ ಮಾತಾಡಬಲ್ಲರು : ನಿನ್ನೇ ಹೇಳಿರುವ ವಿಷಯ ವನ್ನೇ ಇಂದು ಎದುರಿಸಿ ಮಾತನಾಡಿದರೂ ಇಂದು ಮಾತಾಡುವದೇ ಸರಿಯೆಂದು ಎತ್ತಿಹಿಸುವ ಚಾತುರ್ಯ ಹಾಗೂ ಎದೆಗಾರಿಕೆ ಅವರಿಗಿದೆ.

ಅಧಿಕಾರ ಅಡ್ಡವನ್ನೇರಿರುವ ಕಾಂಗ್ರೆಸ್ಸು ಭಾಷಾ ಸಮಸ್ಯೆ ಕುರಿತು ಏನೋ ಕನಸು ಕಂಡಿದೆಯಂತೆ ; ಒಡನೆ ಅದಕ್ಕೆ ಪ್ರತಿಪಕ್ಷಗಳು ಪ್ರತಿಕ್ರಿಯೆಯನ್ನು ಪ್ರಕಟಿಸಿದವು : ಶ್ರೀ ರಾಜಗೋಪಾಲಾಚಾರಿಯವರೂ ಸುಮ್ಮಗುಳಿಯಲಿಲ್ಲ : ಅವರು ತಮ್ಮ ಅಭಿಪ್ರಾಯವನ್ನು [ಅಂದರೆ ಕಾಂಗ್ರೆಸ್ಸನ್ನು ಎದುರಿಸುವ ಕುರಿತು] ವ್ಯಕ್ತಪಡಿಸಿದರು

ದಕ್ಷಿಣದವರನ್ನು ಕಾಂಗ್ರೆಸು ದ್ವಿತೀಯ ಶ್ರೇಣಿಯ ಪ್ರಜೆಗಳನ್ನಾಗಿ ಮಾಡಿತ್ತೆಂದು ಅವರು ' ದಕ್ಷಿಣದವರು ' ಎನ್ನುವ ಪದವನ್ನು ಎತ್ತಿಕಟ್ಟಿದ್ದಾರೆ ; ಹಿಂದಿ ವ್ಯವಹಾರಿಕ ಭಾಷೆ ಆಗಿಬಿಟ್ಟಲ್ಲಿ ದಕ್ಷಿಣದ ಭಾಷೆಗಳಿಗೆ ಭಾರೀ ಹಾನಿಯಾಗುತ್ತದಂತೆ ! ಎಮ್ಮೆಗೆ ಜ್ವರ ಬಂದಾಗ ಕೋಣನಿಗೆ ಬರೆ ಎಳೆದರೆ ಜ್ವರ ಕಮ್ಮಿಯಾಗುತ್ತದಂತೆ ! ಅದು ಹೀಗೆಂದು ಚಕ್ರವರ್ತಿ ರಾಜಗೋಪಾಲಾಚಾರಿಯವರು ಎಲ್ಲಿಂದ ತಿಳಿಸಬಲ್ಲರೋ ? ಇಜವಾಗಿ ಅವರಿಂದ ಅದು ಸಾಧ್ಯವೇ ಇಲ್ಲ.

ಆಂಗ್ಲಾ ಭಾಷೆ ಇನ್ನೂ ಬಿಳಿಯ ಭಾಷೆಯಾಗಿರುವುದರಿಂದ ಅನ್ಯ ರಾಷ್ಟ್ರಗಳು ನಮ್ಮನ್ನು ತಾತ್ಸಾರ ದೃಷ್ಟಿಯಿಂದ ಕಾಣುತ್ತಿವೆ ಎಂಬುದನ್ನು ಸ್ವಾಭಿಮಾನಿ ಭಾರತೀಯ ಮರೆಯಲಾರ : ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ರಷ್ಯ ಭಾರತ ಯಾತ್ರೆಯ ಸಂದರ್ಭಕ್ಕೆ ಹೋಗಿ ಭಿಕ್ಷಾರ ಪತ್ರವನ್ನು ಆಂಗ್ಲಾಭಾಷೆಯಲ್ಲಿ ಅರ್ಪಿಸಿದಾಗ ಅದನ್ನವರು ಸ್ವೀಕರಿಸಲಿಲ್ಲ : ಅದು ಹಳೆಯ ಕಥೆ. ಹೋಗಲಿ

ಇಂದು ನಮ್ಮ ಕಣ್ಮುಂದೆ ನಡೆದುದಾದರೂ ಏನು ? ನಮ್ಮ ಪ್ರಧಾನಿ ಶಿಕ್ಷಣ ಪಡೆಯಲಿಬಹುದ್ದಾರು ಶಾಸ್ತ್ರಿಯವರು ಅಮೆರಿಕೆಗೆ ಹೋಗಿದ್ದಾಗ ಅಲ್ಲಿ ಭಾರತೀಯ ಭಾಷೆಯಲ್ಲಿ ಮಾತಾಡಬೇಕೆಂದು ಅವರಿಗೆ ಹೇಳಲಾಗಿರುತ್ತದೆ ; ಆಂಗ್ಲಾ ಭಾಷೆ ಭಾರತದ ಭಾಷೆ ಇರುವುದಿಲ್ಲವೇ ? ಹಾಗಿರುವಾಗ ಇಂತಹ ಭಾಷೆಯನ್ನು ಶಾಶ್ವತವಿದ್ದುಕೊಂಡು ಜಗತ್ತಿನಲ್ಲಿ ತೃತೀಯ ಶ್ರೇಣಿಯ ಜನರಾಗಿ ನಾವು ಜೀವಿಸಿದ ಇರುವುದು ಒಳ್ಳೆಯದೇ ? — ಅಥವಾ ರಾಜಾಜಿಯವರ ಮಾತಿನಲ್ಲೇ ಹೇಳುವುದಾದರೂ ' ದ್ವಿತೀಯ ಶ್ರೇಣಿಯ ಭಾರತೀಯರಾಗಿರುವ ನದು ಒಳ್ಳೆಯದೇ ? ಜಾಜಾಜಿ ಏನೋ ಗುರಿ ಇಟ್ಟುಕೊಂಡೇ ಈ ಮಾತಿನ ಬಾಣ ಬಿಟ್ಟಿದ್ದಾರೆ

— ಶಿವಶಂಕರ್

Edited, Printed & Published by Dharma prachara nirathe M S Krishna Rao) Proprietor) at the Satyavadi Press Chamarajapuram, Mysore 4

ಮತ್ತೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ಚಳವಳಿ !

*

ಬೆಲೆ ಏರಿಕೆ

ವೆಲ್ಲೂರು — ಮದರಾಸು ರಾಜ್ಯದ ಹೇಂ ಕಟಿಂಗು ಸೆಲೂನ್ ಸಂಘದವರು ಕಾಸಿಗೆ ರೂ 1-50 ಕ್ಕೆ ಮತ್ತು ಶೇವಿಂಗಿಗೆ ಶೇಕಡ 50 ರಷ್ಟು ಹೆಚ್ಚಿಸಿದಾರೆ

*

ಕಾರ್ಡಿನ ದೀರ್ಘ ಪ್ರಯಾಣ

ಶ್ರೀನಗರ — ಒಂದು ಕಾರ್ಡಿಗೆ 16 ಮೈಲಿ ದೂರ ಪ್ರಯಾಣಕ್ಕೆ ತಾಲ್ಲೂವರೆ ವರ್ಷ ಹಿಡಿದಿದೆ ; ಇಲ್ಲಿಗೆ ಹತ್ತಿರದ ಕುಲಗಾಂನಲ್ಲಿ 1961 ಫೆಬ್ರವರಿ 6 ರಂದು ಹಾಕಿದ ಕಾರ್ಡು 16 ಮೈಲಿ ದೂರದ ಇಸ್ಲಾಂಬಾದಿಗೆ 65 ನೇ ಜೂನ್ 25 ರಂದು ತಲಪಿದೆ — ಒಬ್ಬ ಲಾಯರು ತನ್ನ ಕಕ್ಷಿಗಾರನಿಗೆ ತಿಳಿಸಲು ಇದೊಂದು ದಿನ ತಾವು ಕೋರ್ಟಿಗೆ ಹಾಜರಾಗುವುದಿಲ್ಲವೆಂದು ಬರೆದಿದ್ದರು

*

ಕಚ್ ವಿಚಾರದಲ್ಲಿ

ನವದೆಹಲಿ — ಒಪ್ಪಂದದ ಪ್ರಕಾರ ಪಾಕಿಸ್ತಾನವು ರಾಣ್‌ನಲ್ಲಿ ನಡೆಸುವ ಆಕ್ರಮಣವನ್ನು ಬಿಟ್ಟುಹೊಂಡಬೇಕೆಂದು ಪ್ರಧಾನಿಗಳು ಹೇಳಿದರು

—

ಲಂಡನ್ — ಈ ಒಪ್ಪಂದದಿಂದ ಭಾರತ-ಪಾಕ್ ನಡು ಐಕ್ಯತೆಯಾಗಲು ಪ್ರಧಾನಿ ವಿಲ್ಸನ್ ಕೋರಿದ್ದಾರೆ

ಕರಾಚಿ — ' ರಾಣ್'ನಿಂದ ಸೈನ್ಯ ವಾಪಸಾತಿಗೆ ಆಜ್ಞೆ ಕೊಡಲಾಗಿದೆ

ನವದೆಹಲಿ — ಪಾಕಿಸ್ತಾನಿಗಳೆದ್ದು ನಿಂತಿದ್ದ ಧಾಂತ ಸೇನೆ ಹಿಂದಕ್ಕೆ ಸರಿಯುತ್ತಿವೆ.

*

ಬೆಳಗಾಂ — ಮಹಾರಾಷ್ಟ್ರ ಏಕೀಕರಣ ಸಮಿತಿಯು ಆಗಸ್ಟ್ 1 ರಿಂದ ಮೈಸೂರು-ಮಹಾರಾಷ್ಟ್ರ ಗಡಿ ಜಿಲ್ಲೆಗಳ ಪ್ರವಾಸವನ್ನು ಪ್ರಾರಂಭಿಸುವದೆಂದು ವಕ್ತಾರರೊಬ್ಬರು ಹೇಳಿದರು

ಬೊಂಬಾಯಿ — ರೂ 250 ಕೆ ಸರಕಾದ 2 ಸಾಲಾ ಪೂರ್ತಿ ತುಂಬಿತು

*

ಮಾಸ್ಕೋ — ಯುಗಸ್ಲೊವ್ ಅಧ್ಯಕ್ಷ ಟೀಟೋ ಮತ್ತು ರಷ್ಯಾ ಅಧ್ಯಕ್ಷ ಬ್ರೆಳೆಯುತ್ತ ಮೈತ್ರಿಯ ಜನತೆಗೆ ಭಾರತದ ರೀತಿಯಲ್ಲಿ ಕೈಮುಗಿದು ನಮಸ್ಕೆಎಂದರು

*

ಬೆಂಗಳೂರು — ಹೋಲೀವುಡ್‌ನ ' ಡಿಸ್ನೇಲ್ಯಾಂಡ್ ' ಮಾದರಿಯಲ್ಲಿ ನೆಹರೂ ಸ್ಮಾರಕಕ್ಕಾಗಿ ' ಬಾಲ ಭವನ ನಿರ್ಮಿಸಲು ಯೋಚಿಸಲಾಗಿದೆ ; ಈ ಬಗ್ಗೆ ಒಂದು ಕೋಟಿ ಶೇಖರಿಸಲು ನಿರ್ಧರಿಸಲಾಗಿದೆ

*

ಕೊಲಂಬೊ — ಸಿಲೋನಿನಲ್ಲೂ ಭೂದಾನ ಪ್ರಾರಂಭವಾಗಿದೆ

ಕಾಲೇಜಿಗೆ ಸೇರಲು

ಹುಬ್ಬಳ್ಳಿ — ಡಾನೇಷನ್ನು ಮೂಲಕ ಕಾಲೇಜುಗಳಿಗೆ ಪ್ರವೇಶ ಪಡೆಯುವದು ಹೋಗಬೇಕೆಂದು ಕರ್ನಾಟಕ ವಿಶ್ವವಿದ್ಯಾನಿಲಯದ ಉಪ ಕುಲಪತಿ ಶ್ರೀ ಪವಾಟಿ ಹೇಳಿದರು

*

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವಿಷ್ಟಿ
ಸಂಪತ್ಕೃಷ್ಣಜೋಯಿಸಂವರಂಡ

ಭಾನುವಾರ ಷಷ್ಠಿ ಪುಬ್ಬ

ಕ್ರಿಕೆಟ್ ಟೆಸ್ಟಿನಿಂದಾದ ಲಾಭ

ಮದರಾಸು— 64 ನೇ ಅಕ್ಟೋಬರಿನಲ್ಲಿ ನಡೆದ ಆಸ್ಟ್ರೇಲಿಯಾ ಟೆಸ್ಟ್ ಮ್ಯಾಚುಗಳಿಂದ ರೂ 497839 ಶೇಖರಿಸಲಾಯಿತೆಂದು ಕ್ರಿಕೆಟ್ ಸಂಘದ ವಂದಿ: ಅದರಲ್ಲಿ ಕ್ರಿಕೆಟ್ ಬೋರ್ಡಿಗೆ ರೂ 150000 ಕೊಟ್ಟು, ಖಾತೆಪುಸ್ತಗಳನ್ನೆಲ್ಲಾ ಪರೀಕ್ಷಿತಮಾಡಿ, ಸಂಘಕ್ಕೆ ರೂ 98457-92 ಉಳಿದಿದೆ.

ಮಂತ್ರಿ ಸೊಸೆಯ ಮೇಲೆ ಅತ್ಯಾಚಾರ ಪ್ರಯತ್ನ

ನೈನಿಟಾಲ್ —ಮಂತ್ರಿಯೊಬ್ಬರ ಮೇಲೆ ಉನ್ನತ ದರ್ಜೆಯ ವಿಚಾರಣೆ ಪ್ರಾರಂಭವಾಗಿದೆ: ಈ ಮಂತ್ರಿ ವಾಸಿಸುವ ಸ್ಥಳದ ಪಕ್ಕದ ನಿವಾಸದಲ್ಲಿ ವಾಸಿಸುವ ಎಂಜಿನೀಯರಿನ ಅವೇರಿಕಾ ಪತ್ನಿಯ ಮೇಲೆ ಅತ್ಯಾಚಾರ ನಡೆಸಲು ಪ್ರಯತ್ನಿಸಿದನೆಂಬುದೇ ಆರೋಪ — ಈ ಮಹಿಳೆಯು ಒಬ್ಬ ಕಾಂಗ್ರೆಸ್ ನಾಯಕ ಶ್ರೀಮತಿ ಮಾಜಿ ಪಂಜಾಬು ಮಂತ್ರಿಯ ಸೊಸೆ.

ದಿವ್ಯವಾಣಿ

ತಾತ್ಸಾರ್ಯಗಳನ್ನು ಸಾಲಾತವಾಡುವುದು ನಿನ್ನ ಸ್ವಭಾವವಾಗಿದ್ದರೆ ನಿನಗಾಗಿ ಮಾತ್ರ ಮಾಡು: ಆದರೆ ಅಪಾಯಗಳನ್ನು ನಿಮ್ಮ ನೆರೆಹೊರೆಯವರಿಗೆ ಸಾಲಾ ಕೊಡಬೇಡ. — ಕ್ಲಿಪ್ಲಿಂಗ್

ಆಪೆರ— ಜನಪ್ರಿಯತ 2 ನೇ ವಾರ

ವಲವನಕು ವಲವ್ಯ

ಮಾಡರ್ನ್ ಥಿಯೇಟರ್ಸ್‌ನವರ 100 ನೇ ಅಮೋಘ ಕನ್ನಡ ಚಿತ್ರ

ನಟವರ್ಗ— ಜಮುನಾ ಗಣೇಶ್, ಸಾವಿತ್ರಿ, ಅಶೋಕ್, ತಂಗವೇಲು, ಮುತ್ತುಲಕ್ಷ್ಮಿ, ಮನೋರಮ

ವುಡ್‌ಲಾಂಡ್ಸ್ ತೇಜಸ್ವಿ 7 ನೇ ವಾರ

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ

ಜಾನ್ವರ್ JANWAR

ಪ್ರೇಕ್ಷಕರಿಂದ ಪ್ರಶಂಸಿಸಲ್ಪಡುತ್ತಾ ಯಶಸ್ವಿಯಾಗಿ ನಡೆಯುತ್ತಿರುವ

ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

Help The GORAKSHANA

.... ಗೋರಕ್ಷಣಕ್ಕೆ ಬೆಂಬಲ ನೀಡಿ ....

ಕನ್ನಡನಾಡಿನಲ್ಲಿ ಗೋಸಂಕ್ಷಣೆ, ಪಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ

ವಾರ್ಷಿಕ ಚಂದ 50 ಪೈಸೆ ಸಹಾಯಿಸಿರಿ ರೂ 10 ಮತ್ತು ಬೆಂಬಲಿಗರು ರೂ 25 (ಹಿಂದು ಸಾರಿಮಾತ್ರ) :

ಗೋರಕ್ಷಣಕ್ಕೆ ಲೇಖನಗಳನ್ನು ಪ್ರೋತ್ಸಾಹ ಧನವನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪೇಟೆ ಬೆಂಗಳೂರು 4